ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) ಉತ್ಪಾದಿಸುವುದಿಲ್ಲ.

ಶ್ರೀ ಜಿ. ಕೆ. ವೆಂಕಟಶಿವರೆಡ್ಡಿ.—ಮಾನ್ಯ ಅಧ್ಯಕ್ಷರೆ, ಶ್ರೀನಿವಾಸಪುರದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಕಚೇರಿಯನ್ನು ಮತ್ತು ಸೋಮಯಾಜುಲಪಲ್ಲಿ ಹಾಗೂ ಗೌನಪಲ್ಲಿಯಲ್ಲಿ ಪೋಲೀಸ್ ಸ್ಟೇಷನ್‌ಗಳನ್ನು ಪ್ರಾರಂಭಿಸಬೇಕೆಂಬ ಬಗ್ಗೆ ಜಿಲ್ಲಾ ಎಸ್.ಪಿ. ಯವರು ಹಾಗೂ ಸೆಂಟ್ರಲ್ ಡಿ.ಐ.ಜಿ. ಯವರು ಮಾಡಿರುವ ಸಲಹೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳ ಪರವಾಗಿ) —ಮಾನ್ಯ. ಅಧ್ಯಕ್ಷರೇ, ಎಸ್.ಪಿ. ಯವರು ಹಾಗೂ ಸೆಂಟ್ರಲ್ ಡಿ.ಐ.ಜಿ.ಯವರು ಮಾನ್ಯ ಸದಸ್ಯರು ಹೇಳಿದ ಸ್ಥಳಗಳಲ್ಲಿ ಪೋಲೀಸ್ ಠಾಣೆಗಳನ್ನು ತೆರೆಯಲು ಸಲಹೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ ಆ ಸಲಹೆಗಳು ನಮ್ಮ ಸರ್ಕಾರಕ್ಕೆ ಇದುವರೆಗೂ ಬಂದಿಲ್ಲ.

ಶ್ರೀ ಜಿ. ಕೆ. ವೆಂಕಟಶಿವರೆಡ್ಡಿ.—ದಯವಿಟ್ಟು ಈ ಹಳ್ಳಿಗಳು ಗಡಿ ಪ್ರದೇಶವಾಗಿರುವುದರಿಂದ ಇಲ್ಲಿ ಪೋಲೀಸ್ ಠಾಣೆಯ ಅವಶ್ಯಕತೆ ಇದೆ, ಆದಷ್ಟು ಜಾಗ್ರತೆ ಈ ಬಗ್ಗೆ ಪರಿಶೀಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ

೧೨೦೦. ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘ ಎಂಬ ಹೆಸರಿನ ಯಾವುದಾದರೂ ಗೃಹ ನಿರ್ಮಾಣ ಸಹಕಾರ ಸಂಘ ಇದೆಯೇ ?

ಆ) ಹಾಗಿದ್ದಲ್ಲಿ ಈ ಸಂಘವು ಯಾವಾಗ ನೋಂದಣಿಯಾಯಿತು ? ಅದರ ನೋಂದಣಿ ಸಂಖ್ಯೆ ಮತ್ತು ದಿನಾಂಕಗಳು ಯಾವುವು ಮತ್ತು ಅದರ ನೋಂದಣಿ ವಿಳಾಸ ಯಾವುದು ?

ಇ) ಈ ಮೇಲ್ಕಂಡ ಸಹಕಾರ ಸಂಘ ಕೆಲಸ ನಿರ್ವಹಿಸುತ್ತಿದೆಯೇ ?

ಈ) ಈ ಸಂಘವು ಸದಸ್ಯರ ಸಲುವಾಗಿ ಯಾವುದಾದರೂ ಬಡಾವಣೆಗಳನ್ನು ತಯಾರಿಸಿದೆಯೇ ? ಹಾಗಿದ್ದಲ್ಲಿ ಭೂಮಿಯನ್ನು ಎಲ್ಲಿ ಸ್ವಾಧೀನಪಡಿಸಿಕೊಂಡು ನಿವೇಶನಗಳನ್ನು ಹಂಚಲಾಗಿದೆ.

ಉ) ನಿಬಂಧಕರು ಆಗಿಂದಾಗ್ಗೆ ನೀಡುತ್ತಿರುವ ನಿರ್ದೇಶನಗಳನ್ನು ಪಾಲಿಸುತ್ತಿದೆಯೇ ?

ಊ) ಕಡೆ ವಾರ್ಷಿಕ ಮಹಾಸಭೆ ನಡೆಸಿದ ದಿನಾಂಕ ಯಾವುದು ?

ಋ) ಮಾನ್ಯ ನಿಬಂಧಕರು ಈ ಸಂಘದ ವಿರುದ್ಧ ಯಾವುದಾದರೂ ಕಾನೂನು ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಹೆಚ್. ಆರ್. ರಾಜು (ಸಹಕಾರ ಸಚಿವರು).—

ಅ) ಇದೆ.

ಆ) ೧೯೬೬ರಲ್ಲಿ. ಸಂಖ್ಯೆ : ಡಿವೈಆರ್ ೪೦೩ : ೬೪-೬೫, ದಿನಾಂಕ ೫-೫-೧೯೬೬. ವಿಳಾಸ ನಂ. ೪೨-೧೩, ೩ನೇ ಮಹಡಿ, ೮ನೇ 'ಇ' ೪ನೇ ಬಡಾವಣೆ, ಜಯನಗರ, ಬೆಂಗಳೂರು-೫೬೦೦೧೧.

ಇ) ಹೌದು.

ಈ) ಹೌದು, ಶಿನಿವಾಗಿಲು, ಅಮಾನಿಕೆರೆ ಮತ್ತು ಜಕ್ಕಸಂದ್ರ.

ಉ) ಇಲ್ಲ.

ಊ) ೨೫-೯-೧೯೮೮.

ಋ) ಸಹಕಾರ ಸಂಘಗಳ ಕಾಯಿದೆ ಕಲಂ ೬೪ (೪)ರಡಿಯಲ್ಲಿ ವಿಚಾರಣೆ ನಡೆಸಿದ್ದು ವಿಚಾರಣೆಯಲ್ಲಿ ಕಂಡು ಬಂದ ನ್ಯೂನತೆಯ ಬಗ್ಗೆ ಸದರಿ ಸಂಘಕ್ಕೆ ತಿಳಿಸಲಾಗಿತ್ತು. ಸಂಘದಿಂದ ಬಂದಿರುವ ಉತ್ತರಗಳನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ. ಮುನಿಸ್ವಾಮಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಕೊಟ್ಟಿರುವ ಉತ್ತರವು ಅಷ್ಟು ಸಮಂಜಸವಾಗಿಲ್ಲ. ಮತ್ತೊಮ್ಮೆ ಮಾನ್ಯ ಸಚಿವರು ಈ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ಈ ಸಂಬಂಧದಲ್ಲಿ ಸೆದರಿ ಸಂಘದಿಂದ ಬಂದಿರುವ ಉತ್ತರಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಸೊಸೈಟಿಯ ವಿಚಾರವಾಗಿ ಈಗಾಗಲೇ ಶಾಂತಿನಗರ ಹೌಸ್‌ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಎಂದು ಹೇಳಿ ಇದರಲ್ಲಿ ರಿಜಿಸ್ಟರ್ಡ್ ಕಛೇರಿ ಶಾಂತಿನಗರದಲ್ಲಿ ಇತ್ತು ಮಂತ್ರಿಗಳು ತಿಳಿಸಿರತಕ್ಕಂಥ ಉತ್ತರದಲ್ಲಿ ಇದರ ರಿಜಿಸ್ಟರ್ಡ್ ಕಛೇರಿ ಬೆಂಗಳೂರಿನ ಜಯನಗರದಲ್ಲಿದೆ ಎಂದು ಹೇಳಿದ್ದಾರೆ. ಈ ಮುಂಚೆ ರಿಜಿಸ್ಟರ್ಡ್ ಕಛೇರಿ ಶಾಂತಿನಗರದಲ್ಲಿಯೇ ಇತ್ತು. ಇದರಲ್ಲಿ ಕೊಟ್ಟಿರುವ ವಿಳಾಸ ನೋಡಿದರೆ ಇನ್ನೊಂದು ಕಡೆ ಇದೆ ಇದನ್ನೆಲ್ಲಾ ನೋಡಿದರೆ ಇದರಲ್ಲಿ ಏನೋ ಕುಂಭಕೋಣ ನಡೆದಿದೆ ಎಂದು ಕಾಣುತ್ತದೆ. ಇನ್ನೊಂದು ಏನಾಗಿದೆ ಎಂದರೆ . ...

ಅಧ್ಯಕ್ಷರು.—ಕುಂಭಕೋಣ ನಡೆದಿದೆಯೇ ಎಂದು ಮಾನ್ಯ ಸಚಿವರನ್ನು ಕೇಳೋಣ.....

ಶ್ರೀ ಎಚ್. ಆರ್. ರಾಜು.—ಮಾನ್ಯ ಅಧ್ಯಕ್ಷರೆ, ನಮ್ಮ ಮಾಹಿತಿಯ ಪ್ರಕಾರ ಈ ವಿಳಾಸವು ಸರಿಯಾಗಿ ಇದೆ. ಮಾನ್ಯ ಸದಸ್ಯರು ಅದು ಅಲ್ಲ ಎಂದು ಹೇಳುವುದಾದರೆ ಅದನ್ನು ಸರಿಯೇ ಇಲ್ಲವೇ ಎಂಬುದನ್ನು ಪರಿಶೀಲಿಸೋಣ.

ಶ್ರೀ ಎಂ. ಮುನಿಸ್ವಾಮಿ.—ಈ ಸೊಸೈಟಿಯು ೧೯೬೬ರಲ್ಲಿ ರಿಜಿಸ್ಟರ್ ಆಗಿರುವುದು. ಆದರ ವಿಳಾಸವು ಶಾಂತಿನಗರದ್ದು ಇದೆ. ಯಾರೋ ಕೆಲವು ಖಾಸಗೀ ಸಂಸ್ಥೆಯವರಿಗೆ ಇದನ್ನು ಮಾರಿಕೊಂಡು, ಆ ಕಾರಣವಾಗಿ ಆ ಸೊಸೈಟಿಯು ನಡೆಯುತ್ತಾ ಇಲ್ಲ. ಮತ್ತು ಜನರಲ್ ಬಾಡಿ ಮೀಟಿಂಗ್ ಸಹ ನಡೆದಿಲ್ಲ. ಇದರ ಮೂಲಿಕ ಸುಮಾರು ೬೬ ಎಕರೆ ಭೂಮಿಯನ್ನು ಖಾಸಗಿ ಸಂಸ್ಥೆಯವರಿಗೆ ಮಾರಿದ್ದಾರೆ ಈ ಉತ್ತರ ಸರಿಯಿಲ್ಲದಿರುವ ಕಾರಣ ಸರಿಯಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಆರ್. ರಾಜು.—ಮಾನ್ಯ ಸದಸ್ಯರು ಹೇಳಿದ ಹಾಗೆ ಸೂಕ್ತ ವಿಚಾರಣೆಯನ್ನು ಕುರಿತು ಮಾಡುತ್ತೇನೆ. ೨೫-೯-೧೯೮೮ರಲ್ಲಿ ಈ ಸೊಸೈಟಿಯ ಜನರಲ್‌ಬಾಡಿ ಮೀಟಿಂಗ್ ಆಗಿದೆ.

ಶ್ರೀ ಎಂ. ಮುನಿಸ್ವಾಮಿ.—ಈ ಸೊಸೈಟಿಯಲ್ಲಿ ಶೇಕಡ ೮೦ರಷ್ಟು ಜನರು ಎಸ್‌ಸಿ, ಎಸ್‌ಟಿ ವರ್ಗದವರಿಗೆ ಸೇರಿದವರು ಸದಸ್ಯರಿದ್ದಾರೆ. ಈ ಸೊಸೈಟಿಯವರು ೬೬ ಎಕರೆ ಜಮೀನು ತೆಗೆದುಕೊಂಡು ಖಾಸಗೀಯವರಿಗೆ ಮಾರಿದ್ದಾರೆ. ಆದು ಪತ್ರಿಕೆಯಲ್ಲಿ ಸಹ ಬಂದಿದೆ. ಮಾನ್ಯ ಸಚಿವರು ಈ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಯೋಗ್ಯ ರೀತಿಯಲ್ಲಿ ತನಿಖೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

೧೧-೩೫ ಎ.ಎಂ.

ಶ್ರೀ ಎಸ್. ರಮೇಶ್.—ಈ ತರಹದ ಸೊಸೈಟಿಗಳಿಂದ ನಿಜವಾಗಿಯೂ ಒಳ್ಳೆಯ ಕೆಲಸ ಮಾಡುತ್ತಿರುವ ಸೊಸೈಟಿಗಳಿಗೆ ಕೆಟ್ಟ ಹೆಸರು ಬಂದಿದೆ. ಆದ್ದರಿಂದ ಸರ್ಕಾರ ಕೂಡಲೇ ಈ ಸೊಸೈಟಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಬೆಂಗಳೂರಿನ ಕಾರ್ಮಿಕರು ಸೈಟ್‌ಗಳಿಗಾಗಿ ಕಳೆದ ೧೦-೧೫ ವರ್ಷಗಳಿಂದ ಕಾಯುತ್ತಿದ್ದಾರೆ. ಆದ್ದರಿಂದ ಇಂತಹ ಸೊಸೈಟಿಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಆರ್. ರಾಜು.—ಮಾನ್ಯ ಸದಸ್ಯರು ಹೇಳಿದ್ದು ನನಗೆ ಅರ್ಥವಾಗಿದೆ. ಇದರ ಬಗ್ಗೆ ಪೂರ್ಣವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಅಧ್ಯಕ್ಷರು.—ಶ್ರೀ ಎಂ. ಎಸ್. ಪಾಟೀಲ್ ಅವರ ಪ್ರಶ್ನೆಗೆ ಸಚಿವರು ಸಮಯ ಕೇಳಿದ್ದಾರೆ. ಈ ಸದನ ಮುಂಗಿಯುವುದರೊಳಗೆ ಉತ್ತರ ಬರಬಹುದು.

K.A.S. Officers' Association

1396. SRI T. B. JAYACHANDRA (Kallambella).—Will the Hon'ble Minister for Revenue be pleased to state:—

a) is it a fact that the K.A.S. Officers' Association are agitating since 7 years to upgrade the posts of Thasildars to the cadre of Class-I. If so, what is the decision taken by the Government?